**ಒ.ಎಸ್.ನಂ.358 /2022**

**ಡಿ. ಡಬ್ಲೂ-1**

**ದಿನಾಂಕಃ 15.04.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲು :- ವಾದಿ ಪರ ಶ್ರೀ ಜಿ.ಎನ್.ಎನ್. ವಕೀಲರಿಂದಃ-**

ನನ್ನ ತಾತನ ಹೆಸರು ವೆಂಕಟನಾಯಕ. ನನ್ನ ತಾತನಿಗೆ 3 ಜನ ಮಕ್ಕಳು ಅವರೆಂದರೆ ವೆಂಕಟನಾಯಕ, ಹುಚ್ಚನಾಯಕ ಉ. ಕುಳ್ಳ ಅಂಕನಾಯಕ ಮತ್ತು ಹುಚ್ಚನಾಯಕ. ವೆಂಕಟನಾಯಕ ರವರ 3 ಜನ ಮಕ್ಕಳು ಈಗ ಜೀವಂತವಾಗಿಲ್ಲ. ನಾನು ಮತ್ತು ಪ್ರತಿವಾದಿ 2 ರಿಂದ 7 ರವರು ವೆಂಕಟನಾಯಕ ರವರ ಮಕ್ಕಳು. ವಾದಿಗಳು ಹುಚ್ಚನಾಯಕ ರವರ ಹೆಂಡತಿ ಮತ್ತು ಮಕ್ಕಳು ಎಂದರೆ ಸರಿ. ಹುಚ್ಚ ನಾಯಕ ಉ. ಕುಳ್ಳ ಅಂಕನಾಯಕ ರವರಿಗೆ ಮಕ್ಕಳಿಲ್ಲ. ದಾವಾಸ್ತಿ ಸರ್ವೆ ನಂಬರ್ 2/28 ರಲ್ಲಿ 4 ಎಕರೆ ಇರುತ್ತದೆ. ಸದರಿ ಆಸ್ತಿ ಹುಚ್ಚ ನಾಯಕ ಉ. ಕುಳ್ಳ ಅಂಕನಾಯಕ ರವರಿಗೆ ಮಂಜೂರಾಗಿರುತ್ತದೆ. ಆ ರೀತಿ ಮಂಜೂರಾಗಿರುತ್ತದೆ ಎಂದು ತೋರಿಸಲು ಸಾಗುವಳಿ ಪತ್ರ ಹಾಜರುಪಡಿಸಿರುತ್ತೇನೆ. ಸದರಿ ಆಸ್ತಿ ಹುಚ್ಚನಾಯಕ ಉ. ಕುಳ್ಳ ಅಂಕನಾಯಕ ರವರಿಗೆ ಮಂಜೂರಾಗಿರುವುದಿಲ್ಲ ಬದಲಾಗಿ ವಾದಿ ಗಂಡ ಹುಚ್ಚನಾಯಕ ರವರಿಗೆ ಮಂಜೂರಾಗಿರುತ್ತದೆ ಎಂದರೆ ಸರಿಯಲ್ಲ. ಹುಚ್ಚನಾಯಕ ಉ. ಕುಳ್ಳ ಅಂಕನಾಯಕ ಎಂದು ಸಾಗುವಳಿ ಚೀಟಿಯಲ್ಲಿ ನಮೂದಾಗಿದಿಯಾ ಎಂದರೆ ಆಗಿದೆ ಎಂದು ನುಡಿಯುತ್ತಾರೆ. ಮಂಜಾರಾದಗಿನಿಂದ ಹುಚ್ಚನಾಯಕ ಉ. ಕುಳ್ಳ ಅಂಕನಾಯಕ ರವರ ಹೆಸರಿನಲ್ಲಿ ಪಹಣಿಗಳು ನಮೂದಾಗಿದೀಯಾ ಎಂದರೆ ಆಗಿರುತ್ತದೆ. ಸದರಿ ಪಹಣಿಗಳನ್ನು ಹಾಜರುಪಡಿಸಿರುತ್ತೇನೆ. ಕಂದಾಯ ಪಾವತಿಸುತ್ತಿದ್ದೇನೆ ಎಂದು ತೋರಿಸಲು ಕಂದಾಯ ರಶೀದಿಗಳು ಮತ್ತು ಪಟ್ಟ ಪುಸ್ತಕಗಳನ್ನು ಹಾಜರುಪಡಿಸಿರುತ್ತೇನೆ.

ಮಂಜೂರಾದಗಿನಿಂದ ವಾದಿ ಗಂಡ ಹುಚ್ಚನಾಯಕ ಬಿನ್ ವೆಂಕಟನಾಯಕ ರವರ ಹೆಸರಿನಲ್ಲಿ ಪಹಣಿಗಳು ನಮೂದಾಗಿದೆ ಎಂದರೆ ಸರಿಯಲ್ಲ. ಮಂಜೂರಾದಗಿನಿಂದ ಇದುವರೆಗೂ ವಾದಿಯ ಗಂಡ ಮತ್ತು ವಾದಿ ಇದುವರೆಗೂ ಕಂದಾಯ ಪಾವತಿಸಿಕೊಂಡು ಬರುತ್ತಿದ್ದಾರೆ ಎಂದರೆ ಸರಿಯಲ್ಲ. ವಾದಿಯ ಗಂಡ ಯಾವಾಗ ಮೃತ ಪಟ್ಟಿರುತ್ತಾರೆ ಎಂದು ಗೊತ್ತಿಲ್ಲ. ಅವರು ದಿಃ 31.08.2012 ರಲ್ಲಿ ಮೃತ ಪಟ್ಟಿರುತ್ತರೆ ಎಂದರೆ ಸರಿ. ಹುಚ್ಚನಾಯಕ ಉ. ಕುಳ್ಳ ಅಂಕನಾಯಕ ರವರು ಯಾವಾಗ ಮೃತ ಪಟ್ಟಿರುತ್ತಾರೆ ಎಂದು ಗೊತ್ತಿಲ್ಲ.

ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿರುತ್ತೇನೆ. ಅವರು ದಿಃ 08.07.2018 ರಲ್ಲಿ ಮೃತಪಟ್ಟಿರುತ್ತಾರೆ ಎಂದರೆ ಸರಿ. ಹುಚ್ಚನಾಯಕ ಉ. ಕುಳ್ಳ ಅಂಕನಾಯಕ ರವರು ಬದುಕಿದ್ದ ಕಾಲದಲ್ಲಿ ಅ.ದಾ. ನಂ 193/1997 ರಂತೆ 1 ನೇ ವಾದಿ ಮತ್ತು ಅವರ ಗಂಡನ ವಿರುದ್ಧ ದಾವೆ ಸಲ್ಲಿಸಿದ್ದರು ಎಂದರೆ ಸರಿ.

ಅದೇ ರೀತಿ ವಾದಿ ಗಂಡ ಅದಾ ನಂ 137/1991 ರಂತೆ ನನ್ನ ತಂದೆಯ ವಿರುದ್ಧ ದಾವೆ ಹೂಡಿದ್ದರು ಎಂದರೆ ಸರಿ. ಸದರಿ ಎರಡು ದಾವೆಗಳ ಮೇಲ್ಮನವಿ ಈಗಲೂ ಮಾನ್ಯ ಹುಚ್ಚ ನ್ಯಾಯಾಲಯ ದಲ್ಲಿ ಬಾಕಿ ಇದೆ ಎಂದರೆ ಸರಿಯಲ್ಲ. ಸದರಿ ಮಾನ್ಯ ಹುಚ್ಚ ನ್ಯಾಯಾಲಯದ ಆದೇಶದ ಪ್ರತಿಯನ್ನು ಹಾಜರುಪಡಿಸಿರುತ್ತೇನೆ. ಹುಚ್ಚನಾಯಕ ರವರು ಮೃತ ಪಟ್ಟ ನಂತರ ವಾದಿಗಳು ಪೌತಿ ಖಾತೆ ಮಾಡಿಕೊಡುವಂತೆ ಅರ್ಜಿ ಕೊಟ್ಟಿದ್ದರು ಎಂದರೆ ಸರಿ. ಸದರಿ ಅರ್ಜಿಗೆ ನಾನು ತಕರಾರು ಸಲ್ಲಿಸಿದ್ದು, ವಾದಿಗಳ ಹೆಸರಿಗೆ ಖಾತೆಯಾಗಿರುತ್ತದೆ ಎಂದರೆ ಸರಿ. ಸದರಿ ಖಾತೆಯನ್ನು ಪ್ರಶ್ನಿಸಿ ಹುಣಸೂರು ಎ ಸಿ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿರುತ್ತೇನೆ ಎಂದರೆ ಸರಿ. ಸದರಿ ಮೇಲ್ಮನವಿಯನ್ನು ತಿರಸ್ಕರಿಸಿ ಸಿವಿಲ್ ನ್ಯಾಯಾಲಯದಲ್ಲಿ ಪರಿಹಾರ ಪಡೆದುಕೊಳ್ಳಿ ಎಂದು ಅದೇಶ ಮಾಡಿರುತ್ತಾರೆ ಎಂದರೆ ಸರಿ. ಸದರಿ ಆದೇಶದಂತೆ ನಾನು ದಾವೆ ಸಲ್ಲಿಸಿರುವುದಿಲ್ಲ. ನಂತರ ವಾದಿ ಸದರಿ ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿ. ಎ ಸಿ ನ್ಯಾಯಾಲಯದಲ್ಲಿ ಆದೇಶ ಅದ ನಂತರ ವಾದಿ ಸ್ವತ್ತಿಗೆ ತೊಂದರೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

ದಾವಾ ಸ್ವತ್ತಿನ ಪೂರ್ವ ದಿಕ್ಕಿಗೆ ಸಣ್ಣದೇವಯ್ಯ ಮತ್ತು ಥಾಮಸ್ ರವರ ಜಮೀನು. ಪಶ್ಚಿಮಕ್ಕೆ ರಾಮಮೂರ್ತಿ ಮತ್ತು ಜಶ್ವಂತ್ ರವರ ಜಮೀನು, ಉತ್ತರಕ್ಕೆ ಓಣಿ ಮತ್ತು ದಕ್ಷಿಣಕ್ಕೆ ಸರ್ಕಾರಿ ರಸ್ತೆ ಎಂದರೆ ಸರಿ. ಮಂಜೂರಾಗಿನಿಂದಲೂ ಸದರಿ ಸ್ವತ್ತಿನ ಚಕ್ಕುಬಂಧಿಯಲ್ಲಿ ವಾದಿಗಳು ವ್ಯವಸಾಯ ಮಾಡಿಕೊಂಡು ಬರುತ್ತಿದ್ದಾರೆ ಎಂದರೆ ಸರಿಯಲ್ಲ. ನಿಪಿ 9 ರಲ್ಲಿ ಹುಚ್ಚನಾಯಕ ಬಿನ್ ವಂಕಟನಾಯಕ ರವರಿಗೆ ನಮೂದಾಗಿರುತ್ತದೆ ಎಂದರೆ ಸರಿ. ಹುಚ್ಚನಾಯಕ ಉ. ಕುಳ್ಳ ಅಂಕನಾಯಕ ಎಂದು ಇರುತ್ತದೆ ಎಂದು ನುಡಿಯುತ್ತಾರೆ. ಮಂಜೂರಾತಿ ಪತ್ರದಲ್ಲಿ ಹುಚ್ಚನಾಯಕ ಉ. ಕುಳ್ಳ ಅಂಕನಾಯಕ ಹೆಸರು ನಮೂದಿದೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿರುತ್ತೇನೆ. ಏನು ದಾಖಲೆ ಹಾಜರು ಪಡಿಸಿದ್ದೀರಾ ಎಂದರೆ ನಮ್ಮ ವಕೀಲರಿಗೆ ಗೊತ್ತು ಎಂದು ನುಡಿಯುತ್ತಾರೆ. ಈ ಹಿಂದೆ ನಡೆದ ಪ್ರಕರಣಗಳು ಮತ್ತು ದಾಖಲೆಗಳಲ್ಲಿ ಕುಳ್ಳ ಅಂಕನಾಯಕ ಬಿನ್ ಲೇಟ್ ವೆಂಕಟನಾಯಕ ಎಂದು ಮಾತ್ರ ನಮೂದಾಗಿದೆ ಎಲ್ಲಿಯೂ ಸಹ ಹುಚ್ಚನಾಯಕ ಉ. ಕುಳ್ಳ ಅಂಕನಾಯಕ ಬಿನ್ ವೆಂಕಟನಾಯಕ ಎಂದು ನಮೂದಾಗಿಲ್ಲ ಎಂದರೆ ಸರಿಯಲ್ಲ.

ಕುಳ್ಳ ಅಂಕನಾಯಕ ಮೃತ ಪಟ್ಟ ನಂತರ ಅವರ ವಾರಸುದಾರರಾಗಿ ನಾವು ಮಾನ್ಯ ಹುಚ್ಚ ನ್ಯಾಯಾಲಯದ ಮುಂದೆ ಹಾಜರಾಗಿರುತ್ತೇವೆ. ಕುಳ್ಳ ಅಂಕನಾಯಕ ಮಕ್ಕಳಿಲ್ಲದೆ ಮೃತ ಪಟ್ಟಿದ್ದು ಅವರ ವಾರಸುದಾರರು ಯಾರು ಎಂದರೆ ಮತ್ತು ಪ್ರತಿವಾದಿ 2 ರಿಂದ 7 ರವರು ಎಂದು ನುಡಿಯುತ್ತಾರೆ. ಅದೇ ರೀತಿ ವಾದಿಯ ಗಂಡ ಹುಚ್ಚ ನಾಯಕ ಮತ್ತು ಅವರ ಮಕ್ಕಳು ಸಹ ಕುಳ್ಳ ಅಂಕನಾಯಕ ರವರ ವಾರಸುದಾರರು ಎಂದರೆ ಸರಿಯಲ್ಲ. ಆರ್ ಎಸ್ ಎ ನಂ. 1421/2010 ರಂತೆ ಸಲ್ಲಿಸಿದ್ದ ಮೇಲ್ಮನವಿಯಲ್ಲಿ ಯಾರು ವಾರಸುದಾರರು ಇಲ್ಲ ಎಂದು ವಜಾ ಆಗಿರುತ್ತದೆ ಎಂದರೆ ಸರಿ. ಸದರಿ ಮೇಲ್ಮನವಿ ವಜಾ ಆದ ನಂತರ 1 ನೇ ವಾದಿ ಅರ್ಜಿ ಸಲ್ಲಿಸಿ ವಾರಸುದಾರರನ್ನು ಸೇರಿಸಿದ ಸದರಿ ಮೇಲ್ಮನವಿ ಈಗಲೂ ಬಾಕಿ ಇದೆ ಎಂದರೆ ಸರಿಯಲ್ಲ. ನಿಡಿ 1, 1 ನೇ ವಾದಿ ಗಂಡನಿಗೆ ಮಂಜೂರಾದ ಮಂಜೂರಾತಿ ಪತ್ರ ಎಂದರೆ ಸರಿ. ಹುಚ್ಚನಾಯಕ ಉ. ಕುಳ್ಳ ಅಂಕನಾಯಕ ಎಂದು ಮರಣ ಪತ್ರ ವನ್ನು ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿಡಿ 1 ರಿಂದ 4 ದಾಖಲೆಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಹೊರತುಪಡಿಸಿ ಬೇರೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ದಾವಾಸ್ತಿಯಲ್ಲಿ ವಾದಿಗಳು ಸ್ವಾಧೀನ ಇದ್ದು ಯಾವ ಆಧಾರದ ಮೇಲೆ ತೊಂದರೆ ಕೊಡುತ್ತಿದ್ದೀರಾ ಎಂದರೆ ಹುಚ್ಚನಾಯಕ ಉ. ಕುಳ್ಳ ಅಂಕನಾಯಕ ವಿಲ್ ಮಾಡಿಕೊಟ್ಟಿದ್ದು, ವಾದಿಗಳೇ ತೊಂದರೆ ಕೊಡುತ್ತಿದ್ದಾರೆ ಎಂದು ನುಡಿಯುತ್ತಾರೆ. ಸದರಿ ಮರಣ ಶಾಸನ ಪತ್ರವನ್ನು ಹಾಜರುಪಡಿಸಿರುತ್ತೇನೆ. ಆ ರೀತಿ ಹಾಜರುಪಡಿಸದಿದ್ದರೂ ಮತ್ತು ಸದರಿ ಮರಣ ಪ್ರಮಣ ಪತ್ರನ್ನು ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಕರಾರಿನಲ್ಲಿ ಮರಣ ಶಾಸನ ಪತ್ರ ಬರೆದುಕೊಟ್ಟಿರುತ್ತಾರೆ ಎಂದು ಬರೆಸಿದ್ದೇನೆ ಎಂದರೆ ಸರಿ . ದಾವಾಸ್ತಿಯನ್ನು ಕಬಳಿಸಲು ತೊಂದರೆ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು)

**2 ನೇ ಹೆಚ್ಚುವರಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂಡಾಧಿಕಾರಿಗಳು, ಹೆಚ್.ಡಿ. ಕೋಟೆ.**